ಗುತ್ತಿಗೆ ಕಳುಹಿಸಿ ಕೊಟ್ಟು ಮನೆಗೆ ಹಿಂದಿರುಗುವಾಗ ಸೂರ್ಯ ಆಗಲೇ ಬಾಡಿದ್ದ. ಆದರೆ ಸಂಜೆಯಾಗಿರಲಿಲ್ಲ. ಪಟೇಲರು ಮನೆಗೆ ಹಿಂದಿರುಗಿ ಬಂದವರೇ ಒಂದು ಲೋಟ ಮಜ್ಜಿಗೆ ಕುಡಿದು, ಮತ್ತೆ ಆಚಾರಿ ಕೊಟ್ಯದತ್ತ ಹೋಗಿ ಶ್ರೀಧರಾಚಾರಿಯನ್ನು ಕಂಡು ಆತ ನಾಳೆಯೇ ಒಮ್ಮೆ ಮಿತ್ತಬೈಲಿಗೆ ಹೋಗಿ ಆ ಕೋಟಿ ಚೆನ್ನಯಗಳಂತಿರುವ ತೇಗದ ಮರಗಳನ್ನು ನೋಡಿ, ಆತನ ಕಣ್ಣಿಗೆ ಇಷ್ಟವಾದುದನ್ನು ಆಯ್ಕೆ ಮಾಡಬೇಕೆಂದು ಒಪ್ಪಿಸಿ ಬಂದರು.

ಪಟೇಲರ ಹುಕುಂ ಆದ ಮರುದಿನವೇ ಶ್ರೀಧರಾಚಾರಿ, ಸಾಧು ಶೆಟ್ಟರ ಮಿತ್ತಬೈಲಿಗೆ ಹೋಗಿ ಆ ಮರಗಳ ಚಂದವನ್ನೊಮ್ಮೆ ನೋಡಿ, ತನ್ನ ಕಣ್ಣಿಗೆ ಒಪ್ಪಿದ್ದ ಮರಕ್ಕೆ ಮನಸ್ಸಲ್ಲೇ 'ಗಡಿ ಇಟ್ಟು' ಬರುವಷ್ಟರಲ್ಲೆ ದೇವಪ್ಪ ಶೆಟ್ಟರು ವಾಸುತಂತ್ರಿಗಳನ್ನು ಕಂಡು, 'ವೃಕ್ಷಪೂಜೆ' ಮಾಡಿ, ಮರ ಉರುಳಿಸಬೇಕಾದ ಶುಭ ದಿನವನ್ನು ಅವರಿಂದ ಕೇಳಿ, 'ತಾವೇ ಮುಂದೆ ನಿಂತು ಆ ಕೆಲಸ ಮಾಡಿಕೊಡಬೇಕೆಂದು' ತಂತ್ರಿಗಳನ್ನು ಒಪ್ಪಿಸಿ ಬಂದುಬಿಟ್ಟಿದ್ದರು.

ಮುಂದಿನ ಶುಕ್ರವಾರ ವಾಸುತಂತ್ರಿಗಳ ಮುಂದಾಳತ್ವದಲ್ಲಿ 'ಕೊಡಿಮರ'ಕ್ಕೆ ಮರ ತರುವ ದಿನವು ನಿಗದಿಯಾಗಿತ್ತು. ವಿಷಯ ತಿಳಿದ ಊರವರು, ಪರವೂರವರೆಲ್ಲ 'ಇದು ದೈವದ ಕೆಲಸ'ವೆಂದು ತಮ್ಮ ದಿನದ ಕೆಲಸಗಳನ್ನೆಲ್ಲ ಬದಿಗೊತ್ತಿ ಮಿತ್ತಬೈಲಿಗೆ ಮೆರವಣಿಗೆ ಹೊರಟಿದ್ದರು. ಸಾಧುಶೆಟ್ಟಿ, ಮೊನ್ನೆಯೇ ತನ್ನ ಬಿಡಿಒಕ್ಕಲಿನವರನ್ನು ಕಳಿಸಿ ಮಿತ್ತಬೈಲಿನ ಗದ್ದೆಹುಣಿ ಕಟ್ಟಹುಣಿಗಳನ್ನು ಕೆತ್ತಿಸಿ ಕಾಲುದಾರಿಗಳನ್ನು ಸರಿಪಡಿಸಿ ಇಟ್ಟಿದ್ದ. ಚಾಲಗೇಣಿಯ ತಿಂಮ ಪೂಜಾರಿಗೆ ಗೇಣಿ ಒಕ್ಕಲಮಕ್ಕಳಿಂದ, 'ನಾಳೆ ಮರ ಕಡಿತಾರಂತೆ' ಎಂಬ ಸುದ್ದಿ ಬಂದೊಡನೆ ಆತನಿಗೆ ಸ್ವಯವೇ ಇಲ್ಲದಂತಾಗಿತ್ತು. 'ಇನ್ನು ತಾನಿಲ್ಲಿ ಇರಬಾರದೆಂದು ಯೋಚಿಸಿದ ಆತ, ಕುಡಾಲದ ಬೋಳೂರಲ್ಲಿ ನದಿದಂಡೆಯ ಮೇಲಿದ್ದ ಹಂಚಿನ ಕಾರ್ಖಾನೆಯಲ್ಲಿ ದುಡಿಯುತ್ತಿದ್ದ ತನ್ನ ಹಿರಿಮಗಳ ಮನೆಗೆ ಹೊರಟೇಬಿಟ್ಟಿದ್ದ. ಉಮ್ಮಳಿಸಿ ಬರುತ್ತಿದ್ದ ಆತನ ದುಃಖವನ್ನು ಕಂಡು ಹೆಂಡತಿ ಕಮಲು ಹೇಳಿದ್ದಳು: 'ಅಲ್ಲ... ನಿಮ್ಗೆ ಇರುವಷ್ಟು ಬೇಸರ ದುಃಖ ನಂಗೂ ಇಲ್ವಾ... ಆ ಮರವನ್ನು ಕಡೀತಾರೆ ಅಂತಾನೇ ಇಟ್ಟುಕೊಳ್ಳುವ... ಅದನ್ನು ಕಡಿದರೆ ಅದರಡಿಗೆ ಇನ್ನು ನಾಲ್ಕು ಗಿಡ ನೆಟ್ಟರಾಯಿತಲ್ವ...' ಅಂತ.

> **'ಅಲ್ಲನಾ... ನಿಮ್ಮ ಬ್ಯಾರಿಗಳ ಹಿತ್ತಲಿನ ಮರ ನಮ್ಮ ದೈವದ ಅಂಗಳಕ್ಕೆ ಸಲ್ಲುತ್ತನಾ?' ಅಂತಾ. ಆಗವ ಹೇಳಿದ್ದ 'ನೀವೊಮ್ಮೆ ಸುಮ್ನಿರ್ತೀರಾ ಆಚಾರ್ರೆ? ಈ ಜಾತಿ, ಗೀತಿ, ದೇವ್ರು, ದಿಂಡ್ರು ಅಂತ ನಾವು ಮಾಡಿಕೊಂಡಿದ್ದು ಅಷ್ಟೇ. ದೇವ್ರಿಗೆ ಎಲ್ಲಿದೆ ಜಾತಿ? ಮೇಲಿರುವ ಎಲ್ಲ ದೇವ್ರುಗಳು ಒಂದೇ ಜಾತಿಯವ್ರು,' ಅಂತ. ಆ ಹುಸೇನ್ ಬ್ಯಾರಿಯನ್ನು ಕರೆಸಿ ಮಾತಾಡಿದರೆ ನಮ್ಮ ಕೆಲ್ಸ ಸುಲಭದಲ್ಲಿ ಆಗಬಹುದೇನೋ ?'**

'ಅಲ್ಲ ಮಾರಾಯ್ತಿ... ನೀನೊಬ್ಳು ತಾಯಿಯಾಗಿ ಹೇಳುವ ಮಾತಾ ಇದು?! ಇರುವ ಎರಡು ಮಕ್ಳು ಸಾಯ್ಲಿ... ಮತ್ತೆರಡು ಹೆತ್ತು ಕೊಡ್ತೀನಿ ಅಂದ ಹಾಗಾಯ್ತು ಇದು...' ಎಂದು ತಟ್ಟನೆ ಅಂದಿದ್ದ ಹನಿಗಣ್ಣಾಗಿದ್ದ ತಿಂಮ.